ಲಿಂಗ ತಾರತಮ್ಯವಿಲ್ಲದ, ಸಂಪತ್ತಿನ ಸಮಾನ ಹಂಚಿಕೆ ಇರುವಂತಹ, ರಸ್ತೆ ಕೆರೆಕಟ್ಟೆಗಳು ಎಲ್ಲವೂ ಸಮೃದ್ಧವಾಗಿ ಇರುವಂತಹ ಒಂದು ನಾಡಿನ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಹೊರಡುತ್ತಾನೆ. ಜನರ ಅಭಿಪ್ರಾಯ ಪಡೆದು ಸುಂಕ ವಿಧಿಸುವುದು, ಬಿಡುವಿನ ವೇಳೆಯಲ್ಲಿ ರಸ್ತೆ-ಕೆರೆಕಟ್ಟೆಗಳ ನಿರ್ಮಾಣ, ಜನರನ್ನು ಸ್ವತಃ ಆಡಳಿತದಲ್ಲಿ ಒಳಗೊಳ್ಳುವುದು ಮುಂತಾದ ಕ್ರಮಗಳ ಮೂಲಕ ನಾಡು ಕಟ್ಟುತ್ತಾನೆ. ಭರತನ ನಾಡಿನಲ್ಲಿ ಪ್ರತಿಯೊಬ್ಬರೂ ಮುಖ್ಯ. ಸಾರ್ವಜನಿಕವಾದುದು ನಮ್ಮದು ಎಂದು ಭಾವಿಸಿದಾಗ ಅದರೊಡನೆ ಒಂದು ಬಗೆಯ ಸಖ್ಯ ಬೆಳೆಯುತ್ತದೆ. ಅದನ್ನು ಕಾಪಾಡಬೇಕು ಎಂಬ ಭರತನ ಮಾತು, ಹಕ್ಕು ಮತ್ತು ಹೊಣೆಗಾರಿಕೆ ಎರಡನ್ನೂ ಹೇಳುತ್ತದೆ. ಭಾರತದ ಸಂವಿಧಾನಕ್ಕೆ ಹತ್ತಿರವಾದ ಈ ಅಭಿಪ್ರಾಯಗಳಿಂದ 'ಭರತ ಕಲ್ಪ' ಸಮಕಾಲೀನ ಸಂದರ್ಭದೊಂದಿಗೆ ಸಂವಾದಿಸುತ್ತದೆ.

ಇಲ್ಲಿ ಅಧಿಕಾರದ ವಿಭಿನ್ನ ನಿರ್ವಚನ ಕಾಣುತ್ತದೆ. 'ಆಳುವವರು ಕಟ್ಟಲಾರರು. ಕಟ್ಟುವವರು ಆಳಲಾರರು' ಎಂಬ ಮಾತು ವಾಸ್ತವಕ್ಕೆ ಹಿಡಿದ ಕನ್ನಡಿಯೆಂದು ಅನಿಸುವುದರ ಜೊತೆಗೆ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ, ಕಟ್ಟುವವರೇ ಆಳುವಂತಾದರೆ ಎಂಬ ಆದರ್ಶದ ಸ್ಥಿತಿಯತ್ತ ಬೆಟ್ಟು ಮಾಡಿ ತೋರುತ್ತದೆ. 'ಇವರೆಲ್ಲರೂ ನಮಗಾಗಿ ಎಂದು ಅಂದುಕೊಳ್ಳುವ ಅನಿಸಿಕೆಯಲ್ಲೇ ಮೂಲಭೂತ ದೋಷವಿದೆ' ಎಂಬ ವಿಚಾರವನ್ನು ಪ್ರಭುತ್ವ ಮನಗಂಡಾಗ ಇದು ಸಾಧ್ಯವಾಗುತ್ತದೆ. ಭರತ ರಾಜನಾಗಬೇಕೆಂದು ಬಯಸಿದವನಲ್ಲ. ತನ್ನ ಇಚ್ಛೆಗೆ ವಿರುದ್ಧವಾಗಿ ಕಾಪಾಡಿಕೊಂಡು ಹೋಗುವ ಹೊಣೆ ಅವನ ಹೆಗಲೇರುತ್ತದೆ. ಆಗ ಅವನು ರಾಜಧಾನಿಯಾದ ಅಯೋಧ್ಯೆಯಲ್ಲಿ ವಾಸವಿರದೆ, ಸಮೀಪದ ನಂದಿಗ್ರಾಮದಲ್ಲಿ ಕೃಷಿಕರ ಮಧ್ಯೆ ಕೃಷಿ ಮಾಡುತ್ತಾ, ಸಹಜ ಸುಂದರ ಪ್ರಾಕೃತಿಕ ಪರಿಸರದಲ್ಲಿ ಸರಳವಾಗಿ ಬದುಕು ನಡೆಸುವ ನಿರ್ಧಾರ ಕೈಗೊಳ್ಳುತ್ತಾನೆ. ತಾನು ಕಟ್ಟುವ ರಾಜ್ಯದ ಮಾದರಿಯನ್ನು ರೂಪಿಸುವಾಗ ಅವನು ಬೇರೆ ಬೇರೆ ಬುಡಕಟ್ಟು ರಾಜರುಗಳ ಜೊತೆಗೆ, ಜನಕ ರಾಜನ ಜೊತೆಗೆ, ಕೇಕಯ ರಾಜ್ಯದ ತನ್ನ ಮಾವ ಯುಧಾಜಿತ, ತಾತ ಅಶ್ವಪತಿಯ ಜೊತೆ, ಜಾಬಾಲಿ ಮುನಿಗಳಂತಹವರ ಜೊತೆಗೆ ಚರ್ಚೆ ಮಾಡುತ್ತಾನೆ. ರಾಜ್ಯ ವಿಸ್ತರಣೆ ಮಾಡುವ ಸಂದರ್ಭದಲ್ಲಿ ಬುಡಕಟ್ಟುಗಳ ಜೀವನವಿಧಾನಕ್ಕೆ ಧಕ್ಕೆ ಬಾರದ ಹಾಗೆ ನೋಡಿಕೊಳ್ಳುತ್ತಾನೆ. ಪ್ರಭುತ್ವವೊಂದು ನಿರ್ಣಯಗಳನ್ನು ಕೈಗೊಳ್ಳುವಾಗ ಹೇಗೆ ಎಲ್ಲ ನೆಲೆಗಳಲ್ಲಿಯೂ ಚಿಂತಿಸಬೇಕು ಎಂಬುದನ್ನು ಭರತ ತನ್ನ ನಡೆಯಿಂದ ತೋರುತ್ತಾನೆ.

ಹೆಣ್ಣನ್ನು ಸ್ವಾಯತ್ತತೆ ಇರುವ ವ್ಯಕ್ತಿಯಾಗಿ ನೋಡುವ ಬಗೆ ನಮ್ಮಲ್ಲಿ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಆಕೆ ಒಂದೋ ಶೋಷಣೆಗೆ ಬಲಿಯಾಗುತ್ತಾಳೆ, ಇಲ್ಲವೇ ಕೇಡಿಗೆ ಮೂಲವಾಗುತ್ತಾಳೆ. ಆದರೆ ಇಲ್ಲಿ ಹೆಣ್ಣಿನ ಶಕ್ತಿಯ ಅನಾವರಣ ಹಲವು ಪಾತ್ರಗಳ ಮೂಲಕ ಮಾಡಲಾಗಿದೆ. ಇಲ್ಲಿ ಬದಲಾವಣೆಯ ಚಾಲಕಶಕ್ತಿಯಾಗಿ ಆಕೆ ಕಾಣುತ್ತಾಳೆ. ಹೆಣ್ಣು ಸದಾ ಒಂದಲ್ಲ ಒಂದು ಕೆಲಸದಲ್ಲಿ ನಿರತಳಾಗಿದ್ದರೂ ಅವಳನ್ನು ಶ್ರಮಸಂಸ್ಕೃತಿಯೊಂದಿಗೆ ಗುರುತಿಸಿದ್ದು ಕಡಿಮೆ. ಇಲ್ಲಿ ಊರ್ಮಿಳೆ, ಅರಮನೆಯಿಂದ ದೂರವಿದ್ದು ಕೃಷಿಕಳಾಗಿ ಸರಳ ಬದುಕು ನಡೆಸುತ್ತಾಳೆ. ಮಾಂಡವಿ ಸುತ್ತಲಿನ ಎಲ್ಲ ಹಿತ ಬಯಸುತ್ತಾ ನಿರಂತರ ಕಾಯಕದಲ್ಲಿ ತೊಡಗಿದ್ದರೆ, ಶ್ರುತಕೀರ್ತಿಗೆ ಕಸೂತಿಯಲ್ಲಿ ಆಸಕ್ತಿ. ಕಸೂತಿ, ಹೆಣಿಗೆ ಎಂಬುದು ಎಲ್ಲರನ್ನು ಬೆಸೆಯುವ ಒಂದು ರೂಪಕವಾಗಿಯೂ ಕಾಣುತ್ತದೆ. ಜೊತೆಗೆ, ಭರತ ಕೆಲವು ನಿರ್ಧಾರ ತೆಗೆದುಕೊಳ್ಳುವಲ್ಲಿ, ಶಕ್ತಿ ಸಂಚಯನ ಮಾಡಿಕೊಳ್ಳುವಲ್ಲಿ ಅವನ ಸುತ್ತಲಿನ ಹೆಣ್ಣುಮಕ್ಕಳ ಪ್ರೇರಣೆ ತುಂಬಾ ಇದೆ. ಅದು ಅವನ ಅರಿವಿನಲ್ಲೂ ಇದೆ. ಈ ಮಹಿಳೆಯರು ಕರ್ತೃತ್ವ ಶಕ್ತಿಯುಳ್ಳವರಾಗಿದ್ದಾರೆ. ರಾಜಪ್ರಭುತ್ವದ ಬಿಗಿ, ಪುರುಷಪ್ರಧಾನ ವ್ಯವಸ್ಥೆಯ ಹಿಡಿತ ಸಮಾಜದ ಚೈತನ್ಯವನ್ನೇ ನಲುಗಿಸುವಂಥದ್ದು. ಈ ವ್ಯವಸ್ಥೆಯೊಳಗೇ ಭರತ ಸಿಕ್ಕಿಹಾಕಿಕೊಂಡಿದ್ದಾನೆ. ಇದರ ಅರಿವು ಅವನಿಗೆ ಹೆಣ್ಣುಮಕ್ಕಳ, ದಮನಿತರ ದನಿಗಳನ್ನು ಆಲಿಸುವಂತೆ ಮಾಡಿದೆ. ಜೀವಕೊಲ್ಲುವ ಇಂತಹ ಕಟ್ಟುಪಾಡುಗಳ ಆಚೆಗೆ ಜೀವಪರವಾಗಿ ಭರತ ಯೋಚಿಸುವ ಹಾದಿಯಲ್ಲಿದ್ದಾನೆ. ಆದರೆ ಮೀರುವುದು ಒಮ್ಮೆಗೇ ಸಂಭವಿಸುವುದಲ್ಲ. ಪಿತೃಪ್ರಾಧಾನ್ಯದ ಎಳೆ ಭರತನಲ್ಲೂ ಇದೆ. ಆತ ಮಾಂಡವಿಗೆ ಹೇಳುವ 'ರಾಜನೀತಿಯಲ್ಲಿ ಇಷ್ಟೊಂದು ತಲೆ ಕೊಡುವುದು ಹೆಣ್ಣುಮಕ್ಕಳಿಗೆ ಅನುಚಿತವಾದದ್ದು' ಎಂಬ ಮಾತು ಮೀರುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಲೇ